# ಭಗವದ್ಗೀತೆ ಎಂಬ ಸಮನ್ವಯಶಾಸ್ತ್ರ

ಡಾ. ಹೆಚ್.ವಿ. ನಾಗರಾಜ ರಾವ್



*ಗೀತೆಯಲ್ಲಿ ಸಮತ್ವ, ಸಮನ್ವಯ — ಇದಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಒಂದು ವಿಶೇಷ ಗುಣವಾಗಿ ಇದನ್ನು ಕಾಣಲಾಗಿದೆ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕರು ಹಿರಿಯ ಸಂಸ್ಕೃತ ವಿದ್ವಾಂಸರು. ಅವರು ಮೈಸೂರು ಪ್ರಾಚ್ಯ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು. ನಿರಂತರ ಅಧ್ಯಯನ, ಬರವಣಿಗೆ, ಪ್ರವಚನಾದಿಗಳಲ್ಲಿ ನಿರತರಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ.*

**ಭಾ**ರತದೇಶವು ನಾನಾ ಧರ್ಮಗಳ ನೆಲೆವೀಡು. ನಾನಾ ದರ್ಶನಗಳು ಹುಟ್ಟಿದ ನಾಡು. ಜಗತ್ತನ್ನು ಹಲವು ದೃಷ್ಟಿಗಳಿಂದ ನೋಡಲು ಸಾಧ್ಯ, ಇದರಿಂದ ಅಭಿಪ್ರಾಯಭೇದಗಳು ಬಂದರೂ ಅವು ನಮ್ಮ ಕಲಹಕ್ಕೆ ಕಾರಣವಾಗಬಾರದು ಎಂಬ ತತ್ತ್ವವನ್ನು ಈ ದೇಶವು ಸದಾ ಒಪ್ಪಿಕೊಂಡಿದೆ. ಮಾರ್ಗಗಳು ಬೇರೆ, ಗಮ್ಯವು ಒಂದೇ ಎಂಬ ಸತ್ಯವನ್ನು ಒಪ್ಪಿಕೊಂಡರೆ ಜಗಳಗಳಿಗೆ ಅವಕಾಶವೇ ಇರದು. ಸ್ವಾಮಿ ವಿವೇಕಾನಂದರು ಚಿಕಾಗೋ ಧರ್ಮಸಂಸತ್ತಿನಲ್ಲಿ ಒಂದು ಮಾತನ್ನು ಉದಾಹರಿಸಿದರು –

**‘‘ರುಚೀನಾಂ ವೈಚಿತ್ರ್ಯಾದ್ ಋಜುಕುಟಿಲನಾನಾಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ’’**

(ರುಚಿಭೇದದಿಂದ ಜನರು ನೇರವಾದ ಮಾರ್ಗವನ್ನೋ ವಕ್ರವಾದ ಮಾರ್ಗವನ್ನೋ ಹಿಡಿಯಬಹುದಾದರೂ, ನಾನಾ ನದಿಗಳಿಗೆ ಒಂದೇ ಸಾಗರವು ಗಮ್ಯವಾಗಿರುವಂತೆ ಎಲ್ಲ ಜನರಿಗೆ ನೀನೊಬ್ಬನೇ ಗುರಿಯಾಗಿರುವೆ.)

ಎಲ್ಲ ಧರ್ಮಗಳೂ ಹೇಳುವ ದೇವರು ಒಬ್ಬನೇ ಆದುದರಿಂದ ಅವರ ದಾರಿಗಳು ಭಿನ್ನವಾದರೂ ಅವುಗಳ ಸಮನ್ವಯವನ್ನು ಸಾಧಿಸಿ ವಿವಾದಪರಿಹಾರವನ್ನು ಕಂಡುಕೊಳ್ಳಬೇಕೆನ್ನುವುದು ಸ್ವಾಮಿ ವಿವೇಕಾನಂದರು ಜಗತ್ತಿಗೆ ಕೊಟ್ಟ ಸಂದೇಶ.

ಸಾವಿರಾರು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ನಾನಾ ದರ್ಶನಶಾಸ್ತ್ರಗಳು ಉದಿಸಿದ್ದವು. ಇವೆಲ್ಲಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಉಪನಿಷತ್ತುಗಳಲ್ಲಿರುವ ವಾಕ್ಯಗಳು ಕಾರಣವಾಗಿದ್ದುವು. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ, ವೇದಾಂತ ಎಂಬ ವೇದಗಳ ಪ್ರಾಮಾಣ್ಯವನ್ನೂ ಒಪ್ಪಿಕೊಂಡಿದ್ದ ಆಸ್ತಿಕ ದರ್ಶನಗಳೂ, ಚಾರ್ವಾಕ, ಬೌದ್ಧ,ಜೈನ ಮುಂತಾದ, ವೇದಪ್ರಾಮಾಣ್ಯವನ್ನು ಒಪ್ಪದ ದರ್ಶನಗಳೂ ಜನಪ್ರಿಯವಾಗಿ

ದ್ದುವು. ವೇದಗಳನ್ನು ಒಪ್ಪುವವರಲ್ಲೂ ಕರ್ಮಕಾಂಡಕ್ಕೆ ಪ್ರಾಧಾನ್ಯವನ್ನು ಕೊಡುವವರಿಗೂ ಜ್ಞಾನಕಾಂಡಕ್ಕೆ ಪ್ರಾಧಾನ್ಯವನ್ನು ಹೇಳುವವರಿಗೂ ವಿವಾದಗಳಿದ್ದವು. ಇಂತಹ ಸಂದರ್ಭದಲ್ಲಿ ಪ್ರಾಯಃ ಅಸ್ತಿತ್ವಕ್ಕೆ ಬಂದ ಭಗವದ್ಗೀತೆ ಪರಸ್ಪರ ವಿರುದ್ಧವಾಗಿ ತೋರುವ ದರ್ಶನಗಳಲ್ಲಿ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸಾಕಾರ-ನಿರಾಕಾರ ಪೂಜೆ ಮಾಡುವವರ ಪರಸ್ಪರ ವಿವಾದದ ಸಂದರ್ಭದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಸಾಧನೆಯ ಸ್ಥಿತಿಯಲ್ಲಿ ಸಾಕಾರಪೂಜೆಯನ್ನೂ ಸಿದ್ಧಿಯ ಸ್ಥಿತಿಯಲ್ಲಿ ನಿರಾಕಾರ ಧ್ಯಾನವನ್ನೂ ಬೋಧಿಸಿ ಸಮನ್ವಯವನ್ನು ಸಾಧಿಸಿದುದನ್ನು ಇಲ್ಲಿ ನಾವು ಸ್ಮರಿಸಬಹುದು.

### ಕರ್ಮಕಾಂಡ ಜ್ಞಾನಕಾಂಡಗಳ ಸಮನ್ವಯ

ಕರ್ಮಕಾಂಡವು ಯಜ್ಞಯಾಗಾದಿಗಳ ಆಚರಣೆಯನ್ನು ಬೋಧಿಸುತ್ತದೆ. ಯಜ್ಞಗಳನ್ನು ಮಾಡಿ ಐಹ ಲೌಕಿಕವಾದ ರಾಜ್ಯ, ಪುತ್ರ, ಸುಖ ಇತ್ಯಾದಿ ಫಲವನ್ನು ಪಾರಲೌಕಿಕವಾದ ಸ್ವರ್ಗಾದಿ ಫಲಗಳನ್ನೂ ಪಡೆಯುವುದೇ ಮಾನವಜೀವನದ ಉದ್ದೇಶವೆಂದು ಕರ್ಮಕಾಂಡಿಗಳು ಹೇಳುತ್ತಾರೆ. ಇದನ್ನು ಭಗವದ್ಗೀತೆಯು ಖಂಡಿಸಿದೆ.

**ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।**
**ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥**

**ಕಾಮಾತ್ಮಾನಃ ಸ್ವರ್ಗಪರಾಃ ಜನ್ಮಕರ್ಮಫಲಪ್ರದಾಮ್ ।**
**ಕ್ರಿಯಾವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ ।**

**ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಮ್ ।**
**ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥**

*(ಗೀತೆ, ೨.೪೨-೪೪)*

(ಕರ್ಮಕಾಂಡಾನುಯಾಯಿಗಳು ಹೂವಿನ ಮಾಲೆಯಂತಹ ಮೃದುವಾದ ಮಾತುಗಳನ್ನಾಡುತ್ತಾರೆ. ಅವರು ಕಾಮಾತ್ಮರು, ಸ್ವರ್ಗಸುಖಗಳು ತಮಗೆ ಬೇಕೆಂದು ಆಸೆ ಪಡುವವರು. ಅವರು ಹೇಳುವ ಕ್ರಿಯೆ ಪುನರ್ಜನ್ಮಕ್ಕೆ ಕಾರಣವಾಗುತ್ತದೆ. ಆ ಯಜ್ಞಗಳಲ್ಲಿ ಕ್ರಿಯಾಕಲಾಪ ಹೆಚ್ಚು. ಭೋಗ, ಐಶ್ವರ್ಯಗಳೇ ಆ ಯಜ್ಞಗಳ ಗುರಿ. ಹಾಗೆ ಭೋಗೈಶ್ವರ್ಯಗಳಲ್ಲಿ ಆಸಕ್ತರಾದವರ ಮನಸ್ಸು ಆ ಸುಖದ ಆಸೆಯಿಂದಲೇ ಅಪಹೃತವಾದಂತೆ. ಸಮಾಧಿಯನ್ನು ಹೊಂದುವ ನಿಶ್ಚಯದ ಬುದ್ಧಿ ಅವರಿಗೆ ಹೇಳಿದುದಲ್ಲ.)

ಜ್ಞಾನಕಾಂಡವೆಂದರೆ ಆತ್ಮಜ್ಞಾನವನ್ನೂ ಅದರ ಸಾಧನ ಉಪಾಯಗಳನ್ನೂ ತಿಳಿಸಿಕೊಡುವ ಉಪನಿಷತ್ತುಗಳು. ಅವುಗಳ ಸಾರವಾದ ಜ್ಞಾನಯೋಗವನ್ನೂ ಧ್ಯಾನಯೋಗವನ್ನೂ ಕೃಷ್ಣನು ಬಣ್ಣಿಸಿದ್ದಾನೆ. ಜ್ಞಾನಯೋಗವನ್ನು ಬುದ್ಧಿಯೋಗವೆಂದೂ ಭಗವದ್ಗೀತೆಯಲ್ಲಿ ಹೇಳಿದೆ. ಬುದ್ಧಿಯೋಗದ ಸ್ಪರ್ಶವಿಲ್ಲದ ಕರ್ಮವು ಅತ್ಯಂತ ಕೆಳಗಿನದು ಎಂದೂ ಭಗವಂತನು ತಿಳಿಸಿದ್ದಾನೆ.

**ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ ಧನಂಜಯ ।**
**ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥**

(ಬುದ್ಧಿಯೋಗಕ್ಕೆ ಹೋಲಿಸಿ ನೋಡಿದರೆ ಕರ್ಮವು ತುಂಬ ಕೆಳಗಿನ ವಿಚಾರ. ನೀನು ಬುದ್ಧಿಗೇ ಶರಣಾಗು. ಕೇವಲ ಕಾರ್ಯಫಲವನ್ನು ಕೇಳುವವರು ಕೃಪಣರು.)

ಹಾಗಾದರೆ ಕರ್ಮವನ್ನು ತ್ಯಜಿಸಬೇಕೆ? ಎಂದು ಕೇಳಿದರೆ, ತ್ಯಜಿಸಬಾರದು ಎನ್ನುತ್ತಾನೆ ಭಗವಂತ. ಕರ್ಮಗಳು ಫಲಲಾಭಕ್ಕಾಗಿ, ಸ್ವಾರ್ಥಕ್ಕಾಗಿ ಮಾಡಲ್ಪಟ್ಟಾಗ ಬಂಧಕ. ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ವಸ್ತುತಃ ವಿರೋಧವಿಲ್ಲ. ಕೃಷ್ಣಾರ್ಪಣಬುದ್ಧಿಯಿಂದ ಲೋಕ ಸೇವಾರೂಪವಾಗಿ ಮಾಡಿದ ಕರ್ಮಗಳು ಬುದ್ಧಿಶುದ್ಧಿಗೆ ಕಾರಣವಾಗುತ್ತವೆ. ಫಲಾಭಿಷಂಗರಹಿತವಾಗಿ ಕರ್ಮಗಳನ್ನು ಮಾಡಿ ಜ್ಞಾನಯೋಗಾಚರಣೆಗೆ ಯೋಗ್ಯತೆಯನ್ನು ಗಳಿಸಬೇಕು.

**ಕಾಯೇನ ಮನಸಾ ವಾಚಾ ಕೇವಲೈರಿಂದ್ರಿಯೈರಪಿ ।**
**ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥**

*(ಗೀತೆ, ೫.೧೧)*

(ಶರೀರದಿಂದ, ಮನಸ್ಸಿನಿಂದ, ಮಾತಿನಿಂದ ಅಥವಾ ಕೇವಲ ಇಂದ್ರಿಯಗಳಿಂದಾದರೂ ಯೋಗಿಗಳು ಫಲಾಸಕ್ತಿಯನ್ನು ಬಿಟ್ಟು ಆತ್ಮಶುದ್ಧಿಗಾಗಿ ತಮ್ಮ ಕರ್ತವ್ಯವನ್ನು ಮಾಡುತ್ತಿರುತ್ತಾರೆ.) ಎಂಬಲ್ಲಿ ಶ್ರೀಕೃಷ್ಣನು ಕರ್ಮಕಾಂಡ-ಜ್ಞಾನಕಾಂಡಗಳ ಸಮನ್ವಯವನ್ನು ತೋರಿಸಿದ್ದಾನೆ. ಆದ್ದರಿಂದಲೇ —

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥**

*(ಗೀತೆ, ೧೮.೫)*

(ಯಜ್ಞ, ದಾನ, ತಪಸ್ಸುಗಳನ್ನು ಬಿಡಬಾರದು. ಅವುಗಳನ್ನು ಮಾಡಲೇಬೇಕು. ಏಕೆಂದರೆ ಇವು ಪವಿತ್ರಗೊಳಿಸುವ ಕೆಲಸಗಳು) ಎಂದು ಕೃಷ್ಣನು ಬೋಧಿಸಿದ್ದಾನೆ. ಯಾವಾಗ ಕರ್ಮ, ಯಾವಾಗ ನಿವೃತ್ತಿ ಎಂದರೆ —

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥**

*(ಗೀತೆ, ೬.೩)*

(ಯೋಗವನ್ನು ಸಾಧಿಸಲು ಪ್ರಯತ್ನಿಸುತ್ತಿರುವವನು ಆರುರುಕ್ಷು, ಅವನನ್ನು ರೂಪಿಸುವುದು ಕರ್ಮವೇ. ಆದರೆ ಅವನೇ ಸಾಧನೆಮಾಡಿ ಯೋಗಾರೂಢನಾದಾಗ ಶಮವೇ ಅವನ ಲಕ್ಷಣ.)

ಸಾಧಕಾವಸ್ಥೆಯಲ್ಲಿ ಕರ್ಮಕಾಂಡವನ್ನು ಅನುಸರಿಸೋಣ. ಈ ಕಾರಣದಿಂದಲೇ 'ಮಾ ತೇ ಸಂಗೋಸ್ತ್ವಕರ್ಮಣಿ' ನಿನಗೆ ಕರ್ಮವನ್ನೇ ಮಾಡದ ಆಲಸ್ಯದಲ್ಲಿ ಪ್ರವೃತ್ತಿ ಬೇಡ, ಸೋಮಾರಿ

ಯಾಗಬೇಡ ಎಂದು ಹೇಳಿರುವುದು. ಹೀಗೆ ಭಗವದ್ಗೀತೆಯು ಕರ್ಮಕಾಂಡ-ಜ್ಞಾನಕಾಂಡಗಳ ಸಮನ್ವಯವನ್ನು ಸಾಧಿಸಿದೆ. ಪರಸ್ಪರ ವಿರುದ್ಧ ಎಂದು ಕಾಣಿಸುವ ಅಂಶಗಳ ವಿರೋಧವನ್ನು ಪರಿಹರಿಸಿ ಹೊಂದಿಸಿಕೊಳ್ಳುವುದು ಸಮನ್ವಯ.

### ಸಾಂಖ್ಯ-ಯೋಗ ಸಮನ್ವಯ

ಸಾಂಖ್ಯದರ್ಶನವು ಪ್ರಾಚೀನ. ಗೌತಮಬುದ್ಧನೊಡನೆ ಸಾಂಖ್ಯರು ವಿವಾದ ಮಾಡುತ್ತಿದ್ದರೆಂದು ತ್ರಿಪಿಟಕಗಳಲ್ಲಿ ಉಲ್ಲಿಖಿತವಾಗಿದೆ. ಯೋಗಶಬ್ದವು ವೇದಗಳಲ್ಲಿ ಕಂಡುಬರುತ್ತದೆ (**ವೇದಾಂತವಿಜ್ಞಾನ ಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ**). ಈ ಎರಡು ವಿದ್ಯಾಶಾಖೆಗಳನ್ನು ಸಮಾನ ತಂತ್ರ ಎಂದು ಕರೆಯುತ್ತಾರೆ. ಕಾರಣವೇನೆಂದರೆ, ಎರಡು ದರ್ಶನಗಳೂ ಪ್ರಕೃತಿ-ಪುರುಷ ಎಂಬ ಎರಡು ನಿತ್ಯ ತತ್ತ್ವಗಳನ್ನು ಒಪ್ಪಿಕೊಂಡಿವೆ. ವಿವೇಕವೇ ಕೈವಲ್ಯಕ್ಕೆ ಏಕಮಾತ್ರ ಮಾರ್ಗವೆಂದು ಇಬ್ಬರೂ ಅಂಗೀಕರಿಸಿದ್ದಾರೆ. ಸಾಂಖ್ಯರು ಜ್ಞಾನಕ್ಕೆ ಒತ್ತನ್ನು ನೀಡಿದರೆ, ಯೋಗಮಾರ್ಗಾನುಯಾಯಿಗಳು ಯಮನಿಯಮಾದಿ ಸಾಧನೆಗೆ ಪ್ರಾಧಾನ್ಯವನ್ನು ಕೊಟ್ಟಿದ್ದಾರೆ.

ಇದನ್ನೇ ಶ್ರೀಕೃಷ್ಣನು.

**ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।**
**ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥**

ಎಂದು ಹೇಳಿದ್ದಾನೆ. ಎರಡು ವಿಧವಾದ ನಿಷ್ಠೆ ಎಂದು ಇಲ್ಲಿ ಹೇಳಿದ್ದರೂ ಸಾಂಖ್ಯರು ಸಾಧನೆಯನ್ನಾಗಲಿ, ಯೋಗಿಗಳು ಜ್ಞಾನವನ್ನಾಗಲಿ ನಿರಾಕರಿಸುವುದಿಲ್ಲ. ಇದನ್ನು ಅರಿತುಕೊಳ್ಳದೆ ಆ ಕಾಲದ ಕೆಲವರು ಸಾಂಖ್ಯವೇ ಬೇರೆ, ಯೋಗವೇ ಬೇರೆ, ಅವು ತಂದುಕೊಡುವ ಫಲಗಳೂ ಬೇರೆಬೇರೆ ಎಂದು ಭಾವಿಸಿದ್ದರು. ಈ ದೃಷ್ಟಿ ತಪ್ಪು, ಸಿದ್ಧಿಯನ್ನು ಪಡೆಯಲು ಸಾಂಖ್ಯಯೋಗಗಳು ಎರಡೂ ಬೇಕೆಂಬುದನ್ನು ಶ್ರೀಕೃಷ್ಣನು ಐದನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿ ಸಮನ್ವಯಾಚಾರ್ಯನಾಗಿದ್ದಾನೆ.

**ಸಾಂಖ್ಯಯೋಗೌ ಪೃಥಗ್‌ಬಾಲಾಃ ಪ್ರವದಂತಿ ನ ಪಂಡಿತಾಃ ।**
**ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥**

**ಯತ್ ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।**
**ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥**

*(ಗೀತೆ, ೫. ೪-೫)*

(ಸಾಂಖ್ಯಯೋಗಗಳು ಪರಸ್ಪರ ಭಿನ್ನ ಎಂದು ಮಕ್ಕಳು (ಅಥವಾ ಮೂರ್ಖರು) ಹೇಳುವರು, ಪಂಡಿತರು ಹಾಗೆ ಹೇಳುವುದಿಲ್ಲ. ಇವೆರಡರಲ್ಲಿ ಯಾವುದನ್ನೇ ಆಗಲಿ ಚೆನ್ನಾಗಿ ಆಶ್ರಯಿಸಿದವರು ಎರಡು ಶಾಸ್ತ್ರಗಳ ಫಲವನ್ನು ಪಡೆಯುವರು. ಸಾಂಖ್ಯರು ಯಾವ ಸ್ಥಾನವನ್ನು ತಲುಪುವರೋ ಆ ಸ್ಥಾನವು ಯೋಗಮಾರ್ಗವನ್ನು ಆಶ್ರಯಿಸಿದವರೂ ಸೇರುವರು. ಆದ್ದರಿಂದ ಸಾಂಖ್ಯಯೋಗವೂ ಒಂದೇ ಎಂದು ಕಂಡುಕೊಂಡವನೇ ಸತ್ಯವನ್ನು ಕಾಣುವನು.)

### ಏಕದೇವೋಪಾಸನೆ - ಬಹುದೇವೋಪಾಸನೆ

ಜಗತ್ತಿನಲ್ಲಿರುವ ದೊಡ್ಡ ಧಾರ್ಮಿಕ ವಿವಾದಗಳಲ್ಲಿ ಮುಖ್ಯವಾದುದು ಒಬ್ಬ ದೇವತೆಯನ್ನು ಪೂಜಿಸುವುದು ಸರಿಯೋ ಅಥವಾ ನಾನಾದೇವತೆಗಳನ್ನು ಪೂಜಿಸಬಹುದೋ ಎಂಬ ವಿಷಯವಾಗಿದೆ. ಜಗತ್ತನ್ನು ಸೃಷ್ಟಿಸಿದ ದೇವರು ಒಬ್ಬನೇ, ಅನೇಕರಲ್ಲ ಎಂಬ ಬಗೆಗೆ ದಾರ್ಶನಿಕರ ಸಮ್ಮತಿಯಿದೆ. ಆದರೂ ಭಾರತವರ್ಷದ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ಹಲವಾರು ದೇವತೆಗಳನ್ನು ಪೂಜಿಸಿರುವುದು ವಿದಿತವಾಗುತ್ತದೆ. ವೇದಗಳಲ್ಲಿ ಅಗ್ನಿ, ಇಂದ್ರ, ಸೋಮ, ವಿಷ್ಣು, ರುದ್ರ, ವರುಣ, ಸವಿತೃ, ಲಕ್ಷ್ಮೀ, ದುರ್ಗಾ ಇತ್ಯಾದಿ ದೇವತೆಗಳನ್ನು ಸ್ತುತಿಸುವ ಮಂತ್ರಗಳಿವೆ. **ಏಕೋ ದೇವಃ ಸರ್ವಭೂತೇಷು ಗೂಢಃ, ದೇವ ಏಕೋ ನಾರಾಯಣಃ,** ಮುಂತಾದ ಮಂತ್ರಗಳು ಏಕದೇವೋಪಾಸನೆಯನ್ನೂ ಹೇಳಿವೆ. ನೂರೆಂಟು ದೇವತೆಗಳನ್ನು ಪೂಜಿಸುವ ಜನರು ಒಂದು ಧರ್ಮಕ್ಕೆ ಸೇರಿದವರೆಂದು ಹೇಗೆ ಹೇಳುತ್ತೀರಿ? ಎಂದು ಬೇರೆ ಧರ್ಮಾನುಯಾಯಿಗಳು ಕೇಳುವುದೂ ಉಂಟು.

ಅವರಿಗೆ ನಮ್ಮ ಉತ್ತರ ಸಮನ್ವಯವೆಂಬುದೇ ಆಗಿದೆ. ಗಾಳಿಯ ಹಾಗೆ ಆಕಾಶದಲ್ಲಿ ತೇಲುತ್ತಿರುವ ಆವಿಯೂ, ಜುಳು ಜುಳು ಎಂಬ ಮಂಜುಳ ನಾದದಿಂದ ಹರಿಯುತ್ತಿರುವ ನೀರೂ, ಕಲ್ಲಿನಂತೆ ಕಠಿಣವಾಗಿ ಕಾಣಿಸುವ ಮಂಜುಗಡ್ಡೆಯೂ ವೈಜ್ಞಾನಿಕವಾಗಿ ಒಂದೇ ವಸ್ತು. ಅವಸ್ಥಾಭೇದದಿಂದ ಬೇರೆ ಬೇರೆ ರೂಪಗಳನ್ನು ಧರಿಸಿದ್ದರೂ ವಸ್ತು ಒಂದೇ. ರೂಪಭೇದವಿದ್ದರೂ ಭಗವಂತನು ಒಬ್ಬನೇ. ಈ ಸತ್ಯವನ್ನು ಅನಾದಿಕಾಲದಲ್ಲೇ ಋಷಿಗಳು ಕಂಡಿದ್ದರು. '**ಏಕಂ ಸದ್‌ವಿಪ್ರಾ ಬಹುಧಾ ವದಂತಿ**' ಒಂದೇ ಸತ್ಯವನ್ನು ವಿದ್ವಾಂಸರು ಬಹುವಿಧವಾಗಿ ಹೇಳುತ್ತಾರೆ. ಹೀಗೆ ದೇವರೊಬ್ಬನೇ ಆದರೂ ಅವನ ನಾನಾರೂಪಗಳನ್ನು ನಾನಾ ಹೆಸರುಗಳಿಂದ ಕರೆದು ನಾವು ಪೂಜಿಸುತ್ತೇವೆ ಎಂದು ಈ ದೇಶ ಹೇಳಿದೆ.

ಈ ಸಮನ್ವಯವನ್ನು ಕೃಷ್ಣನು ಸುಂದರವಾಗಿ ಪ್ರತಿಪಾದಿಸಿದ್ದಾನೆ. ಸಹಸ್ರಸಹಸ್ರರೂಪಗಳಲ್ಲಿ ಕಾಣಿಸಿಕೊಳ್ಳುತ್ತಿರುವವನು ನಾನೇ ಎಂದು ಅವನು ಘೋಷಿಸಿದ್ದಾನೆ.

**ಜ್ಞಾನಯಜ್ಞೇನ ಚಾಪ್ಯನ್ಯೇ ಯಜಂತೋ ಮಾಮುಪಾಸತೇ ।**
**ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋಮುಖಮ್ ॥**

*(ಗೀತೆ, ೯-೧೫)*

ಜ್ಞಾನಯಜ್ಞದಿಂದಲೇ ಪೂಜಿಸುತ್ತಾ ಕೆಲವರು ನನ್ನ ಉಪಾಸನೆಯನ್ನು ಮಾಡುವರು. ಒಬ್ಬನಾಗಿ, ಬೇರೆಬೇರೆಯಾಗಿ, ಅನೇಕ ವಿಧಗಳಲ್ಲಿ ವಿಶ್ವರೂಪಿ ಆಗಿರುವ ನನ್ನನ್ನು ಹೇಗೆ ಆದರೂ ಪೂಜಿಸಬಹುದು.

ವಿಭೂತಿಯೋಗವೆಂಬ ಹತ್ತನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ತಾನೇ ಸಮಸ್ತವೂ ಆಗಿರುವುದನ್ನು ವಿವರಿಸಿದ್ದಾನೆ. ತೋರುವ ವಿರೋಧವನ್ನು ಪರಿಹರಿಸಿ ವಾಸ್ತವದ ಏಕತ್ವವನ್ನು ತಿಳಿಸುವ ಭಗವದ್ಗೀತೆ ಒಂದು ಸಮನ್ವಯ ಗ್ರಂಥವಾಗಿರುವುದನ್ನು ಕಾಣಬಹುದು.

ಬಹುದೇವತಾರಾಧನೆಯಲ್ಲಿ ಅವಿರೋಧವನ್ನು ಸಮನ್ವಯವನ್ನೂ ಭಗವದ್ಗೀತೆಯು ಸಾಧಿಸಿರುವುದನ್ನು ಈ ಕೆಳಗಿನ ಶ್ಲೋಕಗಳಲ್ಲಿ ನಾವು ಕಾಣಬಹುದು.

**ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।**
**ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಮ್ ॥**

**ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।**
**ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ ॥**

*(ಗೀತೆ, ೭.೨೧-೨೨)*

(ಯಾವ ಯಾವ ಭಕ್ತನು ಯಾವ ಯಾವ ರೂಪವನ್ನು ಶ್ರದ್ಧೆಯಿಂದ ಪೂಜಿಸಲು ಅಪೇಕ್ಷಿಸುವನೋ ಆಯಾ ಭಕ್ತನಿಗೆ ಆಯಾ ರೂಪದಲ್ಲೇ ಶ್ರದ್ಧೆಯು ಅಚಲವಾಗಿರುವಂತೆ ನಾನು ಮಾಡುತ್ತೇನೆ. ಆ ಶ್ರದ್ಧೆಯಿಂದ ಕೂಡಿದ ಭಕ್ತನು ಆ ರೂಪದ ಮೂರ್ತಿಯ ಆರಾಧನೆಯನ್ನೇ ಮಾಡಲು ಬಯಸುತ್ತಾನೆ. ಆ ಆರಾಧನೆಯಿಂದಲೇ ತನಗೆ ಬೇಕಾದ ಎಲ್ಲ ಫಲಗಳನ್ನೂ ಭಕ್ತನು ಪಡೆದುಕೊಳ್ಳುತ್ತಾನೆ. ಆ ಫಲಗಳನ್ನು ಕೊಡುವವನು ನಾನೇ ಆಗಿರುತ್ತೇನೆ.)

ಇದರಿಂದ ತಿಳಿದು ಬರುವುದೇನೆಂದರೆ ನಾವು ಯಾವ ರೂಪದ ಮತ್ತು ಆಕಾರದ ಯಾವ ರೂಪವನ್ನು ಪೂಜಿಸಿದರೂ ಆ ಪೂಜೆ ತಲುಪುವುದು ಶ್ರೀಕೃಷ್ಣನಿಗೇ. ಫಲವನ್ನು ಕೊಡುವವನು ಯಾವಾಗಲೂ ಶ್ರೀಕೃಷ್ಣನೇ. ಪರಮಹಂಸರು ಎಲ್ಲ ಧರ್ಮಗಳ ದೇವರನ್ನು ಆರಾಧಿಸಿ ಕಂಡುಕೊಂಡ ಪರಮಸತ್ಯವನ್ನೇ ಭಗವದ್ಗೀತೆ ಹೇಳಿದೆ. ದೇವರ ನಾಮಭೇದವಾಗಲಿ ರೂಪಭೇದವಾಗಲಿ ಮನಸ್ಸಿನ ಕ್ಲೇಶಕ್ಕೆ ಅಥವಾ ವೈಮನಸ್ಯಕ್ಕೆ ಕಾರಣ ಆಗಬಾರದು. ಎಲ್ಲ ಪೂಜೆಯನ್ನು ಸ್ವೀಕರಿಸುವ ಭಗವಂತನೊಬ್ಬನೇ.

**'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ'**

(ಎಲ್ಲ ಯಜ್ಞಗಳ ಹವಿಸ್ಸನ್ನು ಸ್ವೀಕರಿಸುವವನೂ, ಅವುಗಳ ಫಲವನ್ನು ಕೊಡುವ ಪ್ರಭುವೂ ನಾನೇ ಆಗಿದ್ದೇನೆ.) ಎಂದು ಶ್ರೀಕೃಷ್ಣನು ಹೇಳಿದ ಮಾತನ್ನು ಎಂದೂ ಮರೆಯಬಾರದು. ಜಯ ರಾಮಕೃಷ್ಣ.




# VIDYA VIKAS

GROUP OF INSTITUTIONS, MYSURU, KARNATAKA

Established : 1991

## OUR INSTITUTIONS

**Vidya Vikas Institute of Engineering and Technology, Mysuru**
Recognised By AICTE & Affiliated to VTU
**Vidya Vikas Department of Master of Technology, (M.Tech), Mysuru**
Recognised By AICTE & Affiliated to VTU
* Production Technology ( Mechanical Department)
* Computer Aided Design of Structure (Civil Department)
* Digital Electronics & Communication Systems (E&C Department)
**Vidya Vikas Department of Master of Business Administration (MBA) Mysuru**
Recognised By AICTE & Affiliated to VTU
**Vidya Vikas Department of Master of Computr Applications (MCA), Mysuru**
Recognised By AICTE & Affiliated to VTU
**Vidya Vikas First Grade College (B.Com, BBM, BCA, BA), Mysuru**
Affiliated to University of Mysuru
**Vidya Vikas Law School, Mysuru**
Affiliated of Karnataka State Law University Hubballi & Approved by Bar Council of India, New Delhi
**Vidya Vikas Institute of Tourism & Hospitality Management, (BTHM), Mysuru**
Affiliated to University of Mysuru
**Vidya Vikas Department of Master of Tourism Administration (MTA) Mysuru**
Affiliated to University of Mysuru
**Vidya Vikas Department of Master of Social Work (MSW), Mysuru**
Affiliated to University of Mysuru
**Vidya Vikas Department of Master of Commerce (M.Com), Mysuru**
Affiliated to University of Mysuru
**Vidya Vikas Department of Master of Science - Mathemetics (M.Sc), Mysuru**
Affiliated to University of Mysuru
**Vidya Vikas Polytechnic & ITI, Mysuru**
Recognised by DTE & AICTE
**Vidya Vikas Pre-University College, Mysuru and Chamarajanagara**
Recognised by Dept. of Pre-University Education Govt. of Karnataka
**Vidya Vikas High School (English Medium), Mysuru**
Approved by Govt. of Karnataka
**Vidya Vikas Nursery and Primary School, Mysuru**
Approved by Govt. of Karnataka
**Vidya Vikas B.Ed., College, Mysuru**
Recognised by NCTE Affilated to University of Mysuru

Campus: #127-128, Mysuru - Bannur Road, Alanahally Post, Mysuru - 570 028
Tel : (0821) 247 1232 / 247 1635, Fax : (0821) 247 3586
E-mail : info@vidyavikas.edu.in

Corporate Office: #10/7, A-8, Chabria Layout, Kumara Park East, Bengaluru - 560 001
Tel : (080) 2213 1569, Fax : (080) 2213 3157
E-mail : vvetco@vidyavikas.edu.in

E-mail: admissions@vidyavikas.edu.in ; www.vidyavikas.edu.in